MARCH 18, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಮಹಾತ್ಮ ಗಾಂಧಿ ನರೇಗಾ ಯೋಜನೆ; ಹಳ್ಳಿಗರಿಗೆ ಬದುಕು ಕಟ್ಟಿಕೊಡುತ್ತಿದೆ – ಸಚಿವ ಪ್ರಿಯಾಂಕ್ ಖರ್ಗೆ.**
- **ಐತಿಹಾಸಿಕ ಹಂಪಿಯ ಸ್ಮಾರಕಗಳ ನವೀಕರಣ; ಅನುದಾನ ನೀಡಲು, ಸಂಸದ ಜಗ್ಗೇಶ, ರಾಜ್ಯಸಭೆಯಲ್ಲಿ ಮನವಿ.**
- **ರಾಜ್ಯದ ಉತ್ತರ ಒಳನಾಡಿನಲ್ಲಿ, ಮೂರು ದಿನಗಳ ವರೆಗೆ, ಬಿಸಿ ಗಾಳಿ ಬೀಸುವ ಸಾಧ್ಯತೆ; 6 ಜಿಲ್ಲೆಗಳಿಗೆ ‘ಯೆಲ್ಲೋ ಅಲರ್ಟ್’.**
- **ಖೇಲೋ ಇಂಡಿಯಾ; ವುಶು ಲೀಗ್ ಸ್ಪರ್ಧೆಗೆ, ಕೊಪ್ಪಳದ ಐಶ್ವರ್ಯ ಹಾಗೂ ಆಶಾ ಆಯ್ಕೆ.**

<><><>

**ಈಗ ವಾರ್ತೆಗಳ ವಿವರ**

<><><>

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ, ಕೈಗೆತ್ತಿಕೊಂಡ ಕಾಮಗಾರಿಗಳು, ಹಳ್ಳಿಗರಿಗೆ ಬದುಕು ಕಟ್ಟಿಕೊಳ್ಳಲು, ಆಧಾರವಾಗುತ್ತಿರುವುದು ಸಂತಸದ ಸಂಗತಿ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.**

<><><>

**ಮೈಸೂರು ಜಿಲ್ಲಾ ಪಂಚಾಯ್ತಿ, ‘ನರೇಗಾ ಯೋಜನೆ ಅಡಿ’ 33 ಕೆರೆಗಳನ್ನು ಅಭಿವೃದ್ಧಿ ಪಡಿಸಿ, ಜಿಲ್ಲೆಯ ನೀರಿನ ಬವಣೆಯನ್ನು ತಗ್ಗಿಸುವಲ್ಲಿ, ಮಹತ್ವದ ಹೆಜ್ಜೆ ಇರಿಸಿದೆ. 201 ಕೆರೆಗಳ ಹೂಳು ತೆಗೆಸಿ, ಸ್ವಚ್ಛಗೊಳಿಸುವ ಕಾಮಗಾರಿ ಪ್ರಗತಿಯಲ್ಲಿದೆ ಎಂದು, ಸಾಮಾಜಿಕ ಮಾಧ್ಯಮ ‘ಫೇಸ್‌ಬುಕ್’ನಲ್ಲಿ, ಪ್ರಕಟಿಸಿದ್ದಾರೆ.**

<><><>

**ಬಳ್ಳಾರಿ ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿ, 14 ಸಾವಿರದ 521 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಗುರಿ ಹೊಂದಲಾಗಿದೆ.**

<><><>

ಈ ಬಾರಿ 66 ಲಕ್ಷ ಮಾನವ ದಿನಗಳ ಕಾಮಗಾರಿ ಸೃಜಿಸುವ ಗುರಿ ಹೊಂದಲಾಗಿದ್ದು, ಕಾರ್ಮಿಕರಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಗ್ರಾಮೀಣರಿಗೆ ಉದ್ಯೋಗ ಹಾಗೂ ವೇತನ ಖಾತ್ರಿ ಜೊತೆ, ಗ್ರಾಮಗಳ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿದೆ ಎಂದು, ಸಚಿವ ಖರ್ಗೆ ಹೇಳಿದ್ದಾರೆ.

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿಯ ಸ್ಮಾರಕಗಳ ಸಂರಕ್ಷಣೆ ಹಾಗೂ ನವೀಕರಣಕ್ಕಾಗಿ, ಅಗತ್ಯ ಅನುದಾನ ನೀಡುವಂತೆ, ಸಂಸದ ಜಗ್ಗೇಶ, ರಾಜ್ಯಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಕೋರಿದ್ದಾರೆ. ವಿಜಯನಗರ ಸಾಮ್ರಾಜ್ಯದ, ಸಾವಿರದ 600ಕ್ಕೂ ಹೆಚ್ಚು ಅವಶೇಷಗಳನ್ನು ಹೊಂದಿರುವ ಹಂಪಿ, ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ತಾಣವಾಗಿದೆ. ವಾರ್ಷಿಕ 4 ಕೋಟಿ 21 ಲಕ್ಷ ರೂಪಾಯಿ ಆದಾಯ ಬರುತ್ತಿದೆ ಎಂದರು. ವಿಜಯ ವಿಠ್ಠಲ ದೇಗುಲ, ಅಚ್ಯುತರಾಯ ದೇವಾಲಯ, ಸಾಲು ಮಂಟಪಗಳ ನವೀಕರಣಕ್ಕೆ, ಅಗತ್ಯ ಅನುದಾನ ಒದಗಿಸುವಂತೆ ಕೇಂದ್ರಕ್ಕೆ ಅವರು ಮನವಿ ಮಾಡಿದರು.

<><><>

ಕಲಬುರಗಿ ಹಾಗೂ ಮೈಸೂರು ಜಿಲ್ಲೆಗಳ, ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ, ನಿಮ್ಹಾನ್ಸ್ ಮಾದರಿಯ ಸಂಸ್ಥೆಯನ್ನು, ತಲಾ 100 ಕೋಟಿ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತ ಸೌಲಭ್ಯಗಳೊಂದಿಗೆ ಸ್ಥಾಪಿಸಲಾಗುವುದು ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದ್ದಾರೆ. ವಿಧಾನ ಪರಿ ‘ತ್ತಿನ ಪ್ರಶ್ನೋತ್ತರ ಕಲಾಪದಲ್ಲಿ, ಶಾಸಕ ತಿಪ್ಪಣ್ಣಪ್ಪ ಕಮಕನೂರು ಅವರ ಚುಕ್ಕೆ ಗುರುತಿನ ಪ್ರಶ್ನೆಗೆ, ಸಚಿವರು, ಉತ್ತರಿಸಿದರು. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ, ಮುಖ್ಯಮಂತ್ರಿಯವರು ಪ್ರಾವಧಾನ ಕಲ್ಪಿಸಿದ್ದಾಗಿ, ಹೇಳಿದರು.

<><><>

ಕಲ್ಲಂಗಡಿ ಬೆಳೆಗೆ ಕೆಂಪು ಹಾಗೂ ಮಸಾರಿ ಮಣ್ಣಿನ ಭೂಮಿ ಸೂಕ್ತ; ಆದರೆ ಧಾರವಾಡ ತಾಲೂಕಿನ, ಬಾಡ ಗ್ರಾಮದ ಕೃಷಿಕ, ಕಲ್ಲನಗೌಡ ಪಾಟೀಲ ಹಾಗೂ ಕುರಬಗಟ್ಟಿಯ ರೈತ, ಗುಡ್ಡಪ್ಪ ಮೈಲಾರ, ಕಪ್ಪು ಮಣ್ಣಿನಲ್ಲಿ, ಅಪರೂಪದ ಹಳದಿ ಬಣ್ಣದ ಕಲ್ಲಂಗಡಿ ಬೆಳೆದು, ಯಶಸ್ವಿಯಾಗಿದ್ದಾರೆ.

<><><>

ಹಳದಿ ಕಲ್ಲಂಗಡಿ ಬೆಳೆಯಲು, ಪ್ರತಿ ಎಕರೆಗೆ 80 ಸಾವಿರದಿಂದ 1 ಲಕ್ಷ ರೂಪಾಯಿ ಖರ್ಚಾಗುತ್ತದೆ. ಕೇವಲ 65 ದಿನಗಳ ಬೆಳೆಯಾಗಿದ್ದು, ಒಂದು ಎಕರೆಗೆ 6 ಸಾವಿರ ಸಸಿಗಳು ಬೇಕಾಗುತ್ತವೆ. ಪ್ರತಿ ಸಸಿಗೆ 2 ರೂಪಾಯಿ ದರವಿದೆ.

<><><>

ತೋಟಗಾರಿಕೆ ಇಲಾಖೆ, ಕಲ್ಲಂಗಡಿ ಬೆಳೆಯಲು, ಹನಿ ನೀರಾವರಿಗಾಗಿ 75 ಸಾವಿರ ರೂಪಾಯಿ ಸಬ್ಸಿಡಿ ಹಾಗೂ ಹೊಸ ಹೈಬ್ರಿಡ್ ಬೀಜಗಳ ಬೆಳೆಗೆ, 8 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುತ್ತದೆ ಎಂದು, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಕ್ಷೇತ್ರೋತ್ಸವದ ವೇಳೆ ಹೇಳಿದರು.

<><><>

ಜಿಲ್ಲಾಧಿಕಾರಿ ದಿವ್ಯಾ ಪ್ರಭು ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಜ್ಯದ ಉತ್ತರ ಒಳನಾಡಿನಲ್ಲಿ ಇಂದಿನಿಂದ, ಮೂರು ದಿನಗಳ ವರೆಗೆ, ಬಿಸಿ ಗಾಳಿ ಬೀಸುವ ಸಾಧ್ಯತೆ ಇದ್ದು, ಸಾರ್ವಜನಿಕರು ಬಿಸಿಲಾಘಾತದಿಂದ ತಪ್ಪಿಸಿಕೊಳ್ಳಲು, ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

ಅತೀ ಹೆಚ್ಚು ತಾಪಮಾನ 41 ದಶಾಂಶ 2 ಡಿಗ್ರಿ ಸೆಲ್ಸಿಯಸ್ ಕಲಬುರ್ಗಿಯಲ್ಲಿ ದಾಖಲಾಗಿದೆ. ಕನಿಷ್ಟ ತಾಪಮಾನ 18 ಡಿಗ್ರಿ ಸೆಲ್ಸಿಯಸ್ ಮೈಸೂರಿನಲ್ಲಿ, ಬಾಗಲಕೋಟೆ ಹಾಗೂ ಧಾರವಾಡದಲ್ಲಿ 39 ಡಿಗ್ರಿ ಉ ್ಣಾಂಶ ದಾಖಲಾಗಿದೆ.

<><><>

ಬಾಗಲಕೋಟೆ, ಬೀದರ್, ಕಲಬುರಗಿ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯಲ್ಲಿ, ಇಂದಿನಿಂದ ಮೂರು ದಿನ, ಬಿಸಿ ಗಾಳಿ ಬೀಸಲಿದ್ದು, ‘ಯೆಲ್ಲೋ’ ಅಲರ್ಟ್ ಘೋಷಿಸಲಾಗಿದೆ.

<><><>

ಬಿಸಿಲ ಬೇಗೆ ಎದುರಿಸಲು, ಆಯು ್ ಉಪಾಯಗಳನ್ನು ಪಾಲಿಸಿ, ಆರೋಗ್ಯ ಕಾಪಾಡಿಕೊಳ್ಳುವಂತೆ, ಚಿತ್ರದುರ್ಗ ಜಿಲ್ಲಾ ಆಯು ್ ಅಧಿಕಾರಿ, ಡಾಕ್ಟರ್ ಚಂದ್ರಕಾಂತ ನಾಗಸಮುದ್ರ ಕೋರಿದ್ದಾರೆ. ವಿಶೇ ’ವಾಗಿ ಹಿರಿಯ ನಾಗರಿಕರು, ಮಕ್ಕಳು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಮರದ ನೆರಳನ್ನು ಆಶ್ರಯಿಸಿ, ಹತ್ತಿಯ ಬಟ್ಟೆಗಳನ್ನೇ ಧರಿಸಿ, ಮೇಲಿಂದ ಮೇಲೆ ನೀರನ್ನು ಕುಡಿಯುತ್ತಿರಿ ಎಂದು ಅವರು ಸಲಹೆ ನೀಡಿದ್ದಾರೆ.

<><><>

‘ಎಪಿಸ್ ಸೆರಾನಾ ಇಂಡಿಕಾ’ ಪ್ರಜಾತಿಯ, ಜೇನು ದುಂಬಿಗಳನ್ನು ಸಾಕಿ, ಮನೆ ಅಂಗಳದ ಕೈ ತೋಟಗಳಲ್ಲಿ ಇಟ್ಟು, ಮನೆ ಬಳಕೆಗೆ ಬೇಕಾಗುವಷ್ಟು, ಶುದ್ಧ ಹಾಗೂ ತಾಜಾ ಜೇನುತುಪ್ಪ ಪಡೆಯಲು, ಮನಸ್ಸು ಮಾಡುವಂತೆ ಪ್ರೇರೇಪಿಸುತ್ತಿದ್ದಾರೆ.. ಧಾರವಾಡದ, ಮನಗುಂಡಿಯ ಶ್ರೀ ಗುರು ಬಸವ ಮಹಾಮನೆಯ, ಶ್ರೀ ಬಸವಾನಂದ ಸ್ವಾಮೀಜಿ. ಸ್ವತಃ ದೃಷ್ಟಿ ವಿಶೇಷ ಚೇತನರಾದರೂ, ಜಗದೀಶ ಬಾಳೀಕಾಯಿ ಎಂಬ, ಜೇನು ಕೃಷಿ ಪರಿಣಿತರ ಸಹಕಾರದಲ್ಲಿ, ಮನಗುಂಡಿ ಆಶ್ರಮದಲ್ಲಿ, 32 ಪೆಟ್ಟಿಗೆಗಳಲ್ಲಿ ಜೇನು ಸಾಕಿ, ಮಾದರಿಯಾಗಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ಬಸವಾನಂದ ಸ್ವಾಮೀಜಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶ್ರೀ ಬಸವಾನಂದ ಸ್ವಾಮೀಜಿ ಧ್ವನಿ 50 ಸೆಕೆಂದುಗಳು

<><><>

ಇದೇ 20 ರಿಂದ 23ನೇ ತಾರೀಖಿನ ವರೆಗೆ, ಛತ್ತೀಸಗಡದ ಬಿಲಾಸಪುರ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತ, ರಾಷ್ಟ್ರೀಯ ಖೇಲೋ ಇಂಡಿಯಾ ಮಹಿಳೆಯರ, ಸೀನಿಯರ್ ವುಶು ಲೀಗ್ ಸ್ಪರ್ಧೆಗೆ, ಕೊಪ್ಪಳದ ಬೇತಲ್ ಮಹಿಳಾ ಪದವಿ ಮಹಾವಿದ್ಯಾಲಯದ, ಐಶ್ವರ್ಯ ಹಾಗೂ ಆಶಾ ಆಯ್ಕೆಯಾಗಿದ್ದಾರೆ. ಕೇಂದ್ರದ ‘ಅಸ್ಮಿತಾ’ (Achieving

**Sports Milestone by Inspiring Women through Action)** ಎಂಬ ಧ್ಯೇಯದಡಿ, ಭಾರತೀಯ ವುಶು ಸಂಘ, ಈ ಕ್ರೀಡಾಕೂಟವನ್ನು ಆಯೋಜಿಸಿದೆ. ಮುಖ್ಯ ತರಬೇತುದಾರ ಬಾಬುಸಾಬ ಮಾರ್ಗದರ್ಶನದಲ್ಲಿ, ಸಂಗಾಪುರ ಗ್ರಾಮದ ಐಶ್ವರ್ಯ 45 ಕಿಲೋ ವಿಭಾಗದಲ್ಲಿ ಹಾಗೂ ಹಿರೇಜಂತಕಲ್ಲಿನ, ಆಶಾ 52 ಕಿಲೋ ಸೀನಿಯರ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು, ಬೆಂಗಳೂರಿನ ರಾಜಭವನದಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಚತುರ್ಥ ಚರಣ್ ಕಬ್ಸ್, ಹೀರಕ್ ಪಂಖ್ ಬುಲಬುಲ್ಸ್ ರಾಜ್ಯ ಪುರಸ್ಕಾರ ಪ್ರದಾನ ಮಾಡಿದರು.

<><><>

ಖ್ಯಾತ ಕಲಾವಿದ, ಹಾದಿಮನಿ ಮೈಸೂರು ರಚಿಸಿದ ಲಾಂಛನವನ್ನು, ಬಂಜಾರ ಸಂಸ್ಕೃತಿ ಮತ್ತು ಭಾ ಾ ಅಕಾದೆಮಿ, ಆಯ್ಕೆ ಮಾಡಿಕೊಂಡಿದೆ. 25 ಸಾವಿರ ರೂಪಾಯಿಗಳ ಗೌರವ ಸಂಭಾವನೆ ನೀಡಿ, ಗೌರವಿಸಿದೆ.

<><><>

ಚಿತ್ರನಟ, ದಿವಂಗತ ಪುನೀತ ರಾಜಕುಮಾರ ಅವರ, 50ನೇ ಜನ್ಮ ದಿನದ ಅಂಗವಾಗಿ, ರಕ್ತದಾನ, ಅನ್ನ ಸಂತರ್ಪಣೆ ಹಾಗೂ ವಿಶೇಷ ಕಾರ್ಯಕ್ರಮಗಳು ಜರುಗಿದವು.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು, ಇಂದಿನಿಂದ 21ರ ವರೆಗೆ, ಶಿವಮೊಗ್ಗದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಲಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನ, ಕಟ್ಟೆಮನೆ ಗ್ರಾಮದ, 65 ವ ್ಷದ ವೃದ್ಧೆ ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ, ಮಂಗನ ಕಾಯಿಲೆ ಸೋಂಕಿನಿಂದ ಮೃತಪಟ್ಟಿದ್ದಾಗಿ, ವರದಿಯಾಗಿದೆ. ಸೋಂಕಿತ 20 ಜನರು ಈಗ ಚೇತರಿಸಿಕೊಂಡಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ಮಹಾತ್ಮ ಗಾಂಧಿ ನರೇಗಾ ಯೋಜನೆ; ಹಳ್ಳಿಗರಿಗೆ ಬದುಕು ಕಟ್ಟಿಕೊಡುತ್ತಿದೆ – ಸಚಿವ ಪ್ರಿಯಾಂಕ್ ಖರ್ಗೆ.
- ಐತಿಹಾಸಿಕ ಹಂಪಿಯ ಸ್ಮಾರಕಗಳ ನವೀಕರಣ; ಅನುದಾನ ನೀಡಲು, ಸಂಸದ ಜಗ್ಗೇಶ, ರಾಜ್ಯಸಭೆಯಲ್ಲಿ ಮನವಿ.
- ರಾಜ್ಯದ ಉತ್ತರ ಒಳನಾಡಿನಲ್ಲಿ, ಮೂರು ದಿನಗಳ ವರೆಗೆ, ಬಿಸಿ ಗಾಳಿ ಬೀಸುವ ಸಾಧ್ಯತೆ; 6 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್'.
- ಖೇಲೋ ಇಂಡಿಯಾ; ವುಶು ಲೀಗ್ ಸ್ಪರ್ಧೆಗೆ, ಕೊಪ್ಪಳದ ಐಶ್ವರ್ಯ ಹಾಗೂ ಆಶಾ ಆಯ್ಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>